


ಎಡದಿಂದ ಬಲಕ್ಕೆ:
1. ಹೊಸ ಗತ್ತಿನಿಂದ ಬಂದಿದ್ದಾಳೆ ವಿದೂಷಕಿ (4)
3. ಶಿರಕ್ಕೇ ತಾಗುವಂತಿದೆ ಮೇಲ್ಛಾವಣಿ (3)
4. ಕಣ್ಣು ಮಿಟುಕಿಸಿದರೇ ಅದೆಂಥ ಹೊಳಪು (3)
6. ಗಣಿ ಕೆಲಸಗಾರ ಅವನ ಗೆಳೆಯ (4)
7. ಸಂವರ್ಧನೆಗೆ ಬೇಕೇ ಬೇಕು ಕಡಲು (3)
9. ಅಡಗುವ ವಿಚಾರ ಬೇಡ, ಇದು ಅರಣ್ಯ (3)
11. ಸಮಾರಾಧನೆಗೆ ಸರಿಯಾಗಿ ಬೀಸಿಬಂದಿತ್ತು ಗಾಳಿ (3)
13. ನಿನ್ನದೇ ಇರಬೇಕು ಈ ಧ್ವನಿ (3)
15. ಅನ್ಯಾಯವನ್ನು ಸರಿಪಡಿಸಲು ಇಲ್ಲಿ ಕಿಂಚಿತ್ತೂ ಶ್ರಮ ಇಲ್ಲ (4)
17. ಇಲ್ಲಿ ಎಲ್ಲ ಶುದ್ಧವಾಗಿರುವುದು ಒಳ್ಳೆಯ ಅದೃಷ್ಟ (3)
18. ಸಮಸ್ತ ಕಾರ್ಯಗಳಿಗೂ ಬೇಕೇ ಬೇಕು ತಲೆ (3)
19. ನಿಶ್ಚಯವಾದವರ ಜೊತೆಗೇ ಇರುಳಿನ ಪ್ರಾಣಿಯೂ ಒಂದಿದೆ (4)

ಮೇಲಿಂದ ಕೆಳಕ್ಕೆ:
1. ಹೊಸ ಮನೆಗೆ ಬಂದವರಿಗೆ ಮೆತ್ತನ್ನ ಗಾದಿ (3)
2. ಮರೆತಿಲ್ಲ ಬಿಡಿ, ಅವನೊಬ್ಬ ತಿಳಿಗೇಡಿ (3)
3. ಮುಳ್ಳು ತೆಗೆವ ತಂತ್ರದ ಅಭ್ಯಾಸ ನಡೆದಿದೆ (3)
5. ಕರಡಿಯನ್ನಾಡಿಸಿದರೂ ಏನನ್ನೂ ಕಾಣಲಾರ (3)
7. ಒಳ್ಳೆಯದೇ ಆದೀತು, ಸಾಹಸಿಗರ ಸ್ನೇಹ (4)
8. ಘನರೂಪದಲ್ಲಿಲ್ಲದ ಊಟ ಹೇಗೆ? (4)
9. ಭೀಮನ ಆಕಾರದ ಬಗ್ಗೆ ಹೆಮ್ಮೆಪಡುವವ ಈತ (4)
10. ಶಾರದೆಯ ಕೃಪೆಯಿಂದ ಆತ ಪರಿಪೂರ್ಣ ಪಂಡಿತ (4)
12. ಮೂರೆಣಿಸುವುದರಲ್ಲಿ ಎಲ್ಲರನ್ನೂ ದಾಟಿ ಹೋಗು (3)
14. ಕವನ ರಚಿಸುತ್ತಲೇ ನೌಕೆಯನ್ನು ನಡೆಸುತ್ತಾನೆಯೇ? (3)
15. ಅನ್ನವನ್ನು ನೀಡಬಲ್ಲದ್ದು ಇದೊಂದೇ ಭೂಮಿ (3)
16. ಮೋಸಮಾಡಿದವರ ವಿರುದ್ಧ ಭಾರೀ ಯುದ್ಧ (3)

### ಪದಬಂಧ 30-05-2013 ರ ಉತ್ತರಗಳು

ಎಡದಿಂದ ಬಲಕ್ಕೆ:
1. ಸಂಚಕಾರ; 3. ಶರಧಿ; 4. ಜತನ; 6. ಸುಪ್ರಭಾತ; 7. ಅನುಮಾನ; 8. ಆಕಸ್ಮಿಕ; 10. ತಿಲಾಂಜಲಿ; 12. ಕಡೆಗಾಲ; 14. ಬನವಾಸ; 16. ಕಡಾಯ; 17. ಕಡಲು; 18. ಕೆಲಕಾಲ.

ಮೇಲಿಂದ ಕೆಳಕ್ಕೆ:
1. ಸಂಧಿಸು; 2. ರಜತ; 3. ಶತಮಾನ; 5. ನಡುಕ; 7. ಅಧೋಗತಿ; 9. ಕರಬಲ; 11. ಜಗಳ; 13. ಕಡೆಗೋಲು; 14. ಬಯಕೆ; 15. ಸಕಲ.

# ಪ್ರಶ್ನಾಂಕಣ

## ಜಲಪಾತ-ಏಕೆ ಅಶಾಶ್ವತ?

ಜಲಪಾತ-ಅದು ಪ್ರಕೃತಿಯ ಒಂದು ಅತ್ಯದ್ಭುತ ಸೃಷ್ಟಿ- ಧಾರೆ ಧಾರೆಯಾಗಿ ಧುಮುಕುತ್ತ, ತುಂತುರುಗಳನ್ನೆರಚುತ್ತ, ಹಾಲ್ನೊರೆಯಂತೆ ಉಕ್ಕಿ ಉಕ್ಕಿ ಸುರಿಯುತ್ತ, ಹಿತಕರ ಮೊರೆತ-ಎದೆ ನಡುಗಿಸುವ ಭೋರ್ಗರೆತ ಹೊಮ್ಮಿಸುತ್ತ, ರೌದ್ರಾವತಾರ ಪ್ರದರ್ಶಿಸುತ್ತ ಅವರೋಹಿಸುವ ಜಲಪಾತಗಳ ಅನುಪಮ ಸೌಂದರ್ಯಕ್ಕೆ ಬೇರಾವ ನಿಸರ್ಗ ದೃಶ್ಯವೂ ಸಾಟಿ ಇಲ್ಲ.

ವಾಸ್ತವವಾಗಿ ಭಾರೀ ಜಲಪಾತಗಳೆಲ್ಲವೂ ಅವಕ್ಕೆ ಮೂಲವಾದ ನದಿಗಳಿಂದಲೇ ಕಡೆಯಲ್ಪಡುತ್ತವೆ. ಉನ್ನತ ಘಟ್ಟ ಪ್ರದೇಶಗಳಲ್ಲಿ ಅಥವಾ ಪರ್ವತ ಶಿಖರಗಳಲ್ಲಿ ಜನಿಸಿ, ಅಪಾರ ಜಲರಾಶಿ ಧರಿಸಿ, ಉಪನದಿಗಳ ಸಾಂಗತ್ಯಗಳಿಸಿ, ರಭಸದಿಂದ ನುಗ್ಗಿ ಪ್ರವಹಿಸುವ ಯುವ ನದಿಗಳದು ಅಸೀಮ ಶಕ್ತಿ; ಅಪಾರ ವಿಚ್ಛಿದ್ರಕ ಬಲ. ಅಂತಹ ನದಿಗಳು ಕಡಲಿನತ್ತ ಸಾಗುವ ತಮ್ಮ ಹಾದಿಯನ್ನು ತಾವೇ ಬಗೆಯುತ್ತವೆ, ಕೊರೆಯುತ್ತವೆ.

ಹೀಗೆ ಯೌವನಾವಸ್ಥೆಯಲ್ಲಿರುವ ಬಲಿಷ್ಠ ನದಿಯೊಂದು ಹರಿವ ಹಾದಿಯಲ್ಲಿ ಗ್ರಾನೈಟ್‌ನಂಥ ಬಹುಗಟ್ಟಿ ಶಿಲಾಹಾಸು ಅಡ್ಡಬಂದು ಅದರಾಚೆಗೆ ಮರಳು ಶಿಲೆಯಂಥ ಮೆದು ಶಿಲೆಯ ವಿಸ್ತಾರ ಪದರಗಳು ಹರಡಿಕೊಂಡಿದ್ದರೆ ಸಹಜವಾಗಿಯೇ ಮೆದುಶಿಲೆಗಳು ಬೇಗ ಬೇಗ ಕೊರೆದುಹೋಗಿ ಪ್ರಪಾತವೊಂದು ಮೈದಳೆಯುತ್ತದೆ. ದಿನೇ ದಿನೇ ಕೊಚ್ಚಿಹೋಗುತ್ತ ಅಗಲವಾಗುತ್ತ ಆಳವಾಗುತ್ತ ತೆರೆದುಕೊಳ್ಳುವ ಅಂಥ ಪ್ರಪಾತಕ್ಕೆ ನದಿ ಧುಮುಕುತ್ತದೆ; ಜಲಪಾತ ಗೋಚರಿಸುತ್ತದೆ. ದಿನೇ ದಿನೇ ಶತಮಾನದಿಂದ ಶತಮಾನಕ್ಕೆ ಅದರ ವೈಭವ ವೃದ್ಧಿಗೊಳ್ಳುತ್ತದೆ. ನಯಾಗರಾ, ವಿಕ್ಟೋರಿಯಾ, ಇಗುವಾಜು, ಗೇರುಸೊಪ್ಪ ಇತ್ಯಾದಿ ಮಹಾನ್ ಜಲಪಾತಗಳೆಲ್ಲ ಅವತರಿಸಿರುವುದು ಹೀಗೆಯೇ.





ಆದರೆ ವಿಸ್ಮಯ-ವೈಭವಗಳೆಲ್ಲ ಏನೇ ಇದ್ದರೂ ಜಲಪಾತಗಳು ಶಾಶ್ವತವಲ್ಲ. ಏಕೆಂದರೆ ನದೀ ಪ್ರವಾಹದ ಯಾವ ಶಕ್ತಿ ನೆಲದ ಶಿಲಾಪದರಗಳನ್ನು ಸವೆಸಿ ಕಡಿದು ಕತ್ತರಿಸಿ ಜಲಪಾತವನ್ನು ಸೃಜಿಸುತ್ತದೋ ಅದೇ ಶಕ್ತಿಯೇ ಜಲಪಾತಕ್ಕೆ ಆಧಾರವಾದ ದೃಢ ಬಂಡೆ ಗೋಡೆಯನ್ನೂ ಶಿಥಿಲೀಕರಿಸುತ್ತದೆ; ತಳದಿಂದಲೂ ಭಗ್ನಗೊಳಿಸುತ್ತದೆ. ಪರಿಣಾಮವಾಗಿ ಸಾವಿರಾರು ವರ್ಷಗಳ ಅವಧಿಯಲ್ಲಿ ಆಧಾರಗೋಡೆಯ ಕೆಳಗೆಲ್ಲ ಪೊಟರೆಗಳು ಒಡಮೂಡಿ, ಬಂಡೆಯೆಲ್ಲ ದುರ್ಬಲಗೊಂಡು ಕೊನೆಗೆ ಇಡೀ ಆಧಾರವೇ ಕುಸಿದು ಬೀಳುತ್ತದೆ. ಜಲಪಾತ ಇಲ್ಲವಾಗಿ ನದಿಯ ಜಲರಾಶಿ ಕೇವಲ ಇಳುಕಲಿನಲ್ಲಿ ಹರಿಯತೊಡಗುತ್ತದೆ. ಜಲಪಾತವಿದ್ದಲ್ಲಿ ಭಾರೀ ಕೊರಕಲೊಂದು ಗೋಚರಿಸುತ್ತದೆ.

ಜಲಪಾತಕ್ಕೆ ಜನ್ಮ ನೀಡುವ ಶಕ್ತಿಯೇ ಹೀಗೆ ಅದರ ಅಂತ್ಯಕ್ಕೂ ಕಾರಣವಾಗುವುದು ಒಂದು ವಿಪರ್ಯಾಸವೇ ಹೌದಲ್ಲ?

■ ಎನ್. ವಾಸುದೇವ್